ಹೆಸರಾಗಲೀ ಎಲ್ಲಿಯೂ ಕಾಣಿಸಿಕೊಂಡಿರಲಿಲ್ಲ. ಹೀಗಾಗಿ, ಒಂದಿಷ್ಟು ಸಹಜ ಪ್ರೀತಿಯಿಂದಲೂ ಒಂದಿಷ್ಟು ಸಂಪ್ರದಾಯಕ್ಕೆ ಅನುಗುಣವಾಗಿಯೂ ಇನ್ನೊಂದಿಷ್ಟು ರೀತಿ–ರಿವಾಜನ್ನು ಪರಿಗಣನೆಗೆ ತೆಗೆದುಕೊಂಡು ಮತ್ತು ನಾನು ಕೂಡ ಇದ್ದೇನೆ ಎಂದು ತನ್ನ ಹಕ್ಕುದಾರಿಕೆಯನ್ನು ಮತ್ತು ಅಸ್ತಿತ್ವವನ್ನು ಪ್ರಕಟಪಡಿಸುವ ಸಲುವಾಗಿ ಅವನು ಮೈಸೂರಿಗೆ ಹೋಗಲೇಬೇಕು ಎಂದು ತೀರ್ಮಾನಿಸಿದ್ದ.

ಬಿಡುವೇ ಸಿಗದಂತೆ ಬಿಸಿಲು ಮಳೆಯಲ್ಲಿ ಬೆಂದು ಕರಕಲಾಗುವ ಸರದಿ ತನ್ನದು ಎಂದು ಆಗಾಗ್ಗೆ ಅವನು ನೊಂದುಕೊಳ್ಳುತ್ತಿದ್ದ. ಬೆಳಗ್ಗೆ ಏಳುತ್ತಿದ್ದಂತೆಯೇ ಹಣ್ಣಿನ ಮಂಡಿಯ ಕಡೆ ಸುಳಿದು, ಖರೀದಿಸಿದ ಹಣ್ಣನ್ನು ಗಾಡಿಯಲ್ಲಿ ಜೋಡಿಸಿಕೊಂಡು ತನ್ನ ನಿಗದಿತ ಸ್ಥಳದಲ್ಲಿ ನಿಲ್ಲದೆ ಇದ್ದರೆ ಅವನಿಗೆ ತಿಂದ ಅನ್ನ ಮೈಗೆ ಹತ್ತುತ್ತಿರಲಿಲ್ಲ. ಇವತ್ತು ನಾಳೆ ಎಂದು ಮೀನಮೇಷ ಎಣಿಸುತ್ತಲೇ ಕೊನೆಗೂ ಖಲಂದರ್ ಆ ದಿನ ಮೈಸೂರಿಗೆ ಹೋಗಲು ತಯಾರಾದ. ಒಂದೆರಡು ಖಾಸಗಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ಹುಡುಕಿಕೊಂಡಿದ್ದ ಅಮ್ಜದ್ ಹಣ್ಣಿನ ಅಂಗಡಿಯ ವ್ಯಾಪಾರಕ್ಕೆ ಕೈ ಹಚ್ಚಲಿಲ್ಲ. ಖಲಂದರ್‌ನ ನಿರಂತರ ದುಡಿಮೆಗೆ ಸಾಥ್ ನೀಡಲಿಲ್ಲ. ಹೀಗಾಗಿ, ಒಂದು ದಿನ ಮುಂಚಿತವಾಗಿಯೇ ಅವನು ಅಳಿದುಳಿದ ಹಣ್ಣುಗಳಿಂದ ಕೂಡಿದ ತನ್ನ ಗಾಡಿಯ ಮೇಲೆ ಪ್ಲಾಸ್ಟಿಕ್ ಶೀಟ್ ಅನ್ನು ಹೊದಿಸಿ ಅದನ್ನು ಹುರಿಯಿಂದ ಬಿಗಿಯಾಗಿ ಕಟ್ಟಿ ಖಾಲಿ ಗೋಡೆಯ ಅಂಚಿಗೆ ತಳ್ಳಿ ಸಕಲ ವ್ಯವಸ್ಥೆಯನ್ನು ಮಾಡಿ ಮೈಸೂರಿನ ಬಸ್ಸನ್ನೇರಿದ.

ಅವನು ಹತ್ತುವ ಮುಂಚಿತವಾಗಿಯೇ ಬಸ್ಸುಗಳ ಬೋರ್ಡುಗಳನ್ನು ಓದಿಕೊಂಡು ಮೈಸೂರಿನ ನಾನ್ ಸ್ಟಾಪ್ ಬಸ್ಸನ್ನೇ ಹತ್ತಿದ್ದ. ಜನ ಕೂಡ ಕಡಿಮೆ ಇದ್ದರೂ ಅವನು ತನಗೆ ಆರಾಮದಾಯಕ ಎನಿಸುವ ಸೀಟನ್ನು ಆಯ್ಕೆಮಾಡಿಕೊಂಡು ಕಿಟಕಿಯ ಬದಿಯಲ್ಲಿ ಕುಳಿತುಕೊಂಡ. ಆದರೆ, ಇನ್ನೇನು ಬಸ್ ಹೊರಡುವ ವೇಳೆಯಾದಾಗ ಘಟನೆಯೊಂದು ನಡೆದು ಹೋಯಿತು. ದಬ ದಬಾ ಬಸ್ಸನ್ನು ಬಡಿದವರನ್ನು ಕಂಡು ಕಂಡಕ್ಟರ್ ಚಿಲಕ ತೆಗೆದ ಕೂಡಲೇ ಹತ್ತರಿಂದ ಹದಿನೈದು ಯುವಕರು ಬಸ್ಸಿನೊಳಗೆ ಏರಿದರು. ಅಕಸ್ಮಾತಾಗಿ ಹಿಂದೆ ತಿರುಗಿ ನೋಡಿದ ಖಲಂದರ್‌ಗೆ ಆಗತಾನೆ ಬಸ್ಸನ್ನೇರಿದ ಅವರನ್ನು ಕಂಡು ಮನದಲ್ಲಿ ಹುಳಿಹುಳಿಯಾಯಿತು. ಅವರ ಪೈಕಿ ಅಗ್ರಗಣ್ಯನಾಗಿ ಎದ್ದು ಕಾಣುವಂತೆ ಇದ್ದವನು ನಾಯಕ. 'ಇದ್ಯಾವ ಪೀಡೆ ಹತ್ತಿಕೊಂಡಿತು' ಎಂದು ಮನಸ್ಸಿನಲ್ಲಿಯೇ ಬೈದುಕೊಂಡ ಖಲಂದರ್ ತನ್ನ ಹೆಗಲಮೇಲಿದ್ದ ಚೌಕವನ್ನು ಮೇಲಕ್ಕೆತ್ತಿ ತನ್ನ ತಲೆಯ ಸುತ್ತ ಪರದೆಯಂತೆ ಕಟ್ಟಿಕೊಂಡು ಕಿಟಕಿಯಾಚೆ ನೋಡಲಾರಂಭಿಸಿದ. ಬಸ್ಸು ಒಂದು ಮಾರು ಕೂಡ ಕ್ರಮಿಸಿರಲಿಲ್ಲ; ಬಸ್ ಸ್ಟ್ಯಾಂಡಿನ ಆವರಣದಲ್ಲಿಯೇ ತೆವಳುತ್ತಿದ್ದ ಬಸ್ಸು ಇನ್ನೊಮ್ಮೆ ನಿಂತಿತು. ಈಗ ಹತ್ತಿದವರು ಇಬ್ಬರು ಮುಸ್ಲಿಮ್ ಮಹಿಳೆಯರು. ಏದುಸಿರು ಬಿಡುತ್ತಾ ಬಸ್ಸನ್ನು ಹತ್ತಿದವಳು ತಲೆಯ ಮೇಲೆ ಸೆರಗನ್ನು ಹೊದ್ದಿದ್ದು, ಮೇಲೆ ಜೀರ್ಣವಾದ ಶಾಲೊಂದನ್ನು ಸುತ್ತುಕೊಂಡಿದ್ದ ವಯಸ್ಸಾದ ಮಹಿಳೆ. ಅವಳ ಕೈಯಲ್ಲಿ ಒಂದೆರಡು ಪ್ಲಾಸ್ಟಿಕ್ಕಿನ ಚೀಲಗಳು ಕಂಡು ಬಂದವು. ಕಂಡಕ್ಟರ್ ಅವಳ ಕೈಯಿಂದ ಚೀಲಗಳನ್ನು ತೆಗೆದುಕೊಂಡು ಕೊನೆಯ ಸೀಟಿನಲ್ಲಿ ಇಟ್ಟ ಮತ್ತು ಕೈ ನೀಡಿ ವಯಸ್ಸಾದ ಮಹಿಳೆಯನ್ನು ಬಸ್ಸಿಗೆ ಹತ್ತಿಸಿಕೊಂಡ. ಅದರ ಹಿಂದೆಯೇ ಕಣ್ಣು ಮಾತ್ರ ಕಾಣುವಂತಿದ್ದ ಕಪ್ಪು ಬುರ್ಖಾ ಧರಿಸಿದ ಮಹಿಳೆಯೊಬ್ಬಳು ಎಳೆಯ ಕೂಸನ್ನು ಮೃದುವಾಗಿ, ಆದರೆ ಬಲವಾಗಿ ತನ್ನ ಎಡಗೈಯಿಂದ ಎದೆಗೆ ಆತುಕೊಂಡು ಬಲಗೈನಿಂದ ಆಸರೆಯನ್ನು ಪಡೆದು ಬಸ್ಸಿನ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದಳು.

ಯಾಕೋ ಖಲಂದರ್‌ಗೆ ಎದೆ ಧಸಕ್ಕೆಂದಿತು.ಇಡೀ ಬಸ್ಸಿನಲ್ಲಿ ತಾನೊಬ್ಬನೇ ಮುಸ್ಲಿಂ. ನಾಯಕ್ ಮತ್ತು ಅವನ ಗೆಳೆಯರ ಉಪಟಳವೇ ಸಾಕಿತ್ತು. ತನ್ನ ಮೇಲೆ ಒಮ್ಮೆ ಅವರ ದೃಷ್ಟಿ ಬಿದ್ದಲ್ಲಿ ಏನು ಬೇಕಾದರೂ ಆಗಬಹುದು. ಈ ಪಾಪದ ಹೆಂಗಸರು ಬೇರೆ ಬಸ್ಸನ್ನು ಹತ್ತಿದ್ದಾರೆ. 'ಅಲ್ಲಾಹನೇ ನಾನಾದರೂ ಏನು ಮಾಡಲಿ? ನೀನೇ ರಕ್ಷಕ' ಎಂದು ಕಾಣದ ಅಲ್ಲಾಹ್ ಖಂಡಿತವಾಗಿ ಆಲಿಸುತ್ತಾನೆ